DOC-52
T-P-2

Reg no KRNN 12 — For Influential Publicity — 6-9-76

ಕೈ ಗಾ ಮಹೋತ್ಸವ ನೆರವೇರಿಸಿ ವಜ್ರ ಮಹೋತ್ಸವನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
೬೦ ನೇ ವಜ್ರಮಹೋತ್ಸವ ವರ್ಷ
★ Satyavadi Daily, Mysore 4 ★

ಸಂಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ — ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ — 15 ಕೈಸ

ಅ. 3 ನೇ ತಾರೀಖು ವೈಭವದ ದಸರಾ ಮೆರವಣಿಗೆ

ಮೈಸೂರು ನಗರದ ದೊಡ್ಡಕೆರೆ ಮೈದಾನದಲ್ಲಿ ಈ ತಿಂಗಳು 24 ನೇ ತಾ ಮೈಸೂರು ದಸರಾ ಕೈಗಾರಿಕಾ ಮತ್ತು ಸಾಂಸ್ಕೃತಿಕ ವಸ್ತುಪ್ರದರ್ಶನ ಆರಂಭ ಆಗುವುದು ಎಂದು ವಸ್ತುಪ್ರದರ್ಶನದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಗಳಾದ ಡಿ. ಜಯದೇವರಾಜ ಅರಸ್ ಮತ್ತು ಬಿ. ಸಿ. ಲಿಂಗಯ್ಯ ಅವರು ಈ ದಿನ ಬೆಳಿಗ್ಗೆ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಪ್ರದರ್ಶನದಲ್ಲಿ ಒಟ್ಟು 350 ಮಳಿಗೆಗಳು ಇದ್ದು 20 ನ್ನು ಬಿಟ್ಟು ಉಳಿದವುಗಳೆಲ್ಲ ಭರ್ತಿ ಆಗಿವೆ ಎಂದು ಅವರು ತಿಳಿಸಿದರು ಅವು ಬೇಗನೆ ಭರ್ತಿ ಆಗುವುದು ಎಂದು ತಿಳಿಸಿದ ಅವರು, ಮೈಸೂರು ನಗರದವರಿಂದ ಹೆಚ್ಚು ಅರ್ಜಿಗಳು ಮಳಿಗೆಗಳಿಗೆ ಬಂದಿಲ್ಲ ಎಂದು ಬೇಡಿಕೆ ಬಂದರೆ ಇನ್ನೂ ಹೆಚ್ಚಾಗಿ ಮಳಿಗೆಗಳನ್ನು ನಿರ್ಮಾಣ ಮಾಡುವುದಾಗಿ ಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ಅಕ್ಟೋಬರು 3 ನೇ ತಾ ವಿಜಯದಶಮಿ ದಿನ ರಾಜೇಂದ್ರ ಅರಮನೆ ಮೇಲಿನ ವಿಜೃಂಭಿಸುವ ಸ್ವರ್ಣ ಅಂಬಾರಿಯಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಭವ್ಯ ಮೆರವಣಿಗೆ ವೈಭವದಿಂದ ನೆರವೇರಿ ರಾಜೇಂದ್ರ ಸ್ಟೋಡಿನಲ್ಲಿ ಇನ್ನೂ 9 ಅನೆಗಳು ಭಾಗವಹಿಸುವುವು ಎಂದು ಅವರು ತಿಳಿಸಿದರು ಮೆರವಣಿಗೆಯಲ್ಲಿ 19 ಜಿಲ್ಲೆಗಳು ಮತ್ತು ಆಯಾಯ ಜಿಲ್ಲೆಗಳ ಸ್ಥಳ ಪ್ರಮುಖತೆಗೆ ಸಂಬಂಧಿಸಿದ ಟ್ಯಾಬ್ಲೋಗಳನ್ನು ಪ್ರದರ್ಶನ ಮಾಡಲಾಗುವುದು ಎಂದು ಅವರು ತಿಳಿಸಿದರು.

ವಸ್ತುಪ್ರದರ್ಶನದಲ್ಲಿ ಪತ್ರಿಕೆಗಳು ದೈನಂದಿನ ಪ್ರಕಟಣೆಗಳನ್ನು ಪ್ರಕಟಿಸಲಾಗುವುದೆ ಎಂದು ಅವರು ತಿಳಿಸಿದರು

ಈ ತಿಂಗಳು 24 ರಿಂದ 1 ವಾರ ಮೈಸೂರು ಪುರಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ವ್ಯವಸ್ಥೆ ಆಗಿರುವುದಾಗಿ ಅವರು ತಿಳಿಸಿದರು.

ಅತ್ಯಪೂರ್ವಕ ಕೃತಜ್ಞತೆ

ಕರ್ನಾಟಕ ಸರ್ಕಾರ ನಮಗೆ ವಸ್ತುಪ್ರದರ್ಶನದ ಉದ್ಘಾಟನೆಗಾಗಿ ಪೂರ್ಣವಾದ ಸಹಾಯ ಸಹಕಾರಗಳನ್ನು ನೀಡುತ್ತಿದೆ ಎಂದೂ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಗಳಾದ ಡಿ ಜಯದೇವರಾಜ ಅರಸ್ ಮತ್ತು ಬಿ ಸಿ ಲಿಂಗಯ್ಯನವರು ಅತ್ಯಪೂರ್ವಕವಾಗಿ ಸರ್ಕಾರಕ್ಕೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು.

ಅಕ್ಷೇಪಣೆಯಲ್ಲ; ಅಪೇಕ್ಷೆ

ಭಾರತದ ಜನಕೋಟಿಗೆ ಸ್ಫೂರ್ತಿದಾಯಕರಾಗಿರುವ ಜನತಾ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಹಾಗೂ ಕರ್ನಾಟಕದ ಜನತಾ ಮುಖ್ಯಮಂತ್ರಿ ಶ್ರೀ ಡಿ ದೇವರಾಜ ಅರಸ್ ಅವರ ಭಾವಚಿತ್ರಗಳು ದಸರಾ ವಸ್ತುಪ್ರದರ್ಶನ ಕಚೇರಿಯಲ್ಲಿ ಕಂಗೊಳಿಸುವಂತೆ ವ್ಯವಸ್ಥೆ ಆಗಬೇಕು.

ಶ್ರೀ ಗಣಪತಿ ವಿಸರ್ಜನೆ

(ವರದಿ : ವಿಕ್ರಂ ಸುಬ್ರಹ್ಮಣ್ಯರಾವ್)

ಕರ್ನಾಟಕದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 29 ನೇ ಮೈಸೂರು ಪಯೋನೀರ್ ಸ್ಕೌಟ್ ತಂಡದ ಆಶ್ರಯದಲ್ಲಿ ನಿನ್ನೆ ಶ್ರೀ ಗಣಪತಿಯ ಮಹಾಮಂಗಳಾರತಿ ವೈಭವದಿಂದ ನೆರವೇರಿತು ಶ್ರೀ ಗಣಪತಿ ವಿಸರ್ಜನೆ ಆದನಂತರ ಪ್ರಸಾದ ವಿನಿಯೋಗ ನಡೆಯಿತು.

●

ಧೋತಿ ಮತ್ತು ಸೀರೆ ತಯಾರಿಕೆ

ನವ ದೆಹಲಿ — ದೇಶದ 6 ರಾಜ್ಯಗಳಲ್ಲಿ 20 ಸಾವಿರ ಲೂಂಗಿಗಳ ಸೈಮಗ್ಗ ಸೆಕ್ಟರಿನಲ್ಲಿ ನಿಯಂತ್ರಿತ ಧೋತಿ ಮತ್ತು ಸೀರೆಗಳನ್ನು ತಯಾರಿಸುವ ಏರ್ಪಾಡು ಸಿದ್ಧವಾಗಿದೆ

ಪ್ರಧಾನಿ ಇಂದಿರಾ ಗಾಂಧಿಯವರ ಸಂದೇಶ

ಇಂದೂರು — ಶಾಂತರೀತಿಯಿಂದ ಸಮಸ್ಯೆಗಳನ್ನು ಪರಿಹಾರ ಮಾಡಿಕೊಂಡು ವಿಶ್ವ ಶಾಂತಿ ಹಾಗೂ ಪೂರ್ಣ ನಿಶ್ಶಸ್ತ್ರೀಕರಣ ವಾತಾವರಣ ಸ್ಥಾಪಿಸಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು 20 ಅಂಶಗಳ ಕಾರ್ಯಕ್ರಮದ ಅಖಿಲ ಭಾರತ ಸಮ್ಮೇಳನಕ್ಕೆ ಇತ್ತಿರುವ ಸಂದೇಶದಲ್ಲಿ ತಿಳಿಸಿರುವರು.

★

ಕರ್ನಾಟಕ ರಾಜ್ಯಪಾಲರವರ ಕರೆ

ಬೆಂಗಳೂರು — ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಅಪೇಕ್ಷೆ ಪಡುವ ದಾದಿಗಳನ್ನು ಹೆಚ್ಚುಹೆಚ್ಚಾಗಿ ತಯಾರಿಸಬೇಕು ಎಂದು ರಾಜ್ಯಪಾಲ ಶ್ರೀ ಉಮಾಶಂಕರ ವೀಕ್ಷಿತ್‌ರವರು ಒಂದು ಸಮಾರಂಭದಲ್ಲಿ ತಿಳಿಸಿದರು.

ವುಡ್‌ಲಾಂಡ್ 3 9 76 ರಿಂದ
ಅಮೋಘ ಆರಂಭ
ದಸ್ ನಂಬರಿ
ಹಿಂದಿ
ಕಲರ್
ಮನೋಜ್ ಕುಮಾರ್ ಹೇಮಮಾಲಿನಿ
ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ
ದಿನ 4 ಪ್ರದರ್ಶನಗಳು.

ಅಪೇರಾ 3 9 76 ರಿಂದ
ಸೆಕ್ರೆಟರಿ
ಎ ನಾಗೇಶ್ವರರಾವ್ ವಾಣಿಶ್ರೀ ಅಭಿನಯ
ಪ್ರತಿ ದಿನ 3 ಪ್ರದರ್ಶನಗಳು

ಕರ್ನಾಟಕ ಲೋಕೋಪಯೋಗಿ ಇಲಾಖೆ

ಸಂಕ್ಷಿಪ್ತ ಟೆಂಡರ್

ಪ್ರ ಕ ಟ ಣೆ

ನಂ 18 ತಾ. 21-8-76

ಈ ಕೆಳಗೆ ಕಂಡ ಕೆಲಸಗಳ ಹೆಸರನ್ನು ಒಳಗೆ ಟೆಂಡರ್‌ದಾರರಿಂದ ಸರಕಾರದ ಸಹಿ ವರಾಡಲಾದ ಪ್ರತ್ಯೇಕವಾದ ಮೊಹರಾದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ 3 ಮತ್ತು ಮೇಲ್ಪಟ್ಟ ವರ್ಗದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಕಂಟ್ರಾಕ್ಟರ್‌ಗಳಿಂದ ಈ ಕೆಳಗೆ ಸಹಿ ಮಾಡಿರುವವರಿಂದ ಆಮಂತ್ರಿಸಲ್ಪಟ್ಟಿದೆ.

ಟೆಂಡರ್ ಫಾರಂಗಳನ್ನು ಸರಬರಾಜು ಮಾಡಲು ಅರ್ಜಿಗಳನ್ನು 10-9-1976 ರಂದು ಸ್ವೀಕರಿಸಲಾಗುವುದು ಕಚೇರಿ ಕೆಲಸದ ವೇಳೆಗಳಲ್ಲಿ ಷೀ ನಂ 1 ಕೆಲಸಕ್ಕೆ ರೂ 10-60 ವಕ್ಕು ಷೀ ನಂ 2 ಕೆಲಸಕ್ಕೆ ರೂ 5-30 ಪಾವತಿ ಮಾಡಿದಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಅಪೇಕ್ಷಿಸುವ ಟೆಂಡರ್‌ದಾರರಿಗೆ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಈ ಹಣವನ್ನು ವಾಪಸು ಮಾಡುವುದಿಲ್ಲ ಅಥವಾ ವರ್ಗಾವಣೆ ಮಾಡಲಾಗುವುದಿಲ್ಲ ಮೊಹರಾದ ಟೆಂಡರ್‌ಗಳನ್ನು 17-9-76 ರ ಮಧ್ಯಾಹ್ನ 4 ಗಂಟೆ ವರೆಗೆ ವಿಭಾಗ ಕಚೇರಿಯಲ್ಲಿ ಸ್ವೀಕರಿಸಲಾಗುವುದು ಮತ್ತು ಅದೇ ದಿನ ಅಥವಾ ಮತ್ತಾವುದಾದರೂ ಅನುಕೂಲವಾದ ದಿನ ಕಂಟ್ರಾಕ್ಟರ್‌ಗಳ ಅಥವ ಅವರ ಪ್ರತಿನಿಧಿಗಳ ಮುಂದೆ ಒಡೆಯಲಾಗುವುದು

ಅಂಚೆ ವೆಚ್ಚಗಳಿಗಾಗಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಅಂಚೆ ಮೂಲಕ ಕಳುಹಿಸಬೇಕಾದ ಸಂದರ್ಭದಲ್ಲಿ ಸೆಟ್ ಒಂದಕ್ಕೆ ಹೆಚ್ಚುವರಿ ಹಣ ರೂ. 5 ನ್ನು ಕೊಡಬೇಕು ಅಂಚೆ ಮೂಲಕ ಟೆಂಡರ್ ಫಾರಂ ರವಾನೆಯಲ್ಲಿ ತಡವಾದಲ್ಲಿ ಜವಾಬ್ದಾರಿ ತೆಗೆದುಕೊಳ್ಳಲಾಗುವುದಿಲ್ಲ ಮತ್ತು ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.

ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ಟೆಂಡರ್ ಸಲ್ಲಿಕೆ ಆದಾಗಲೇ ಅವರು ಟೆಂಡರ್ ಪ್ರಕಟಣೆ ಮತ್ತು ಕಾಂಟ್ರಾಕ್ಟ್‌ನ ಪತ್ರಗಳನ್ನು ಓದಿರುವರೆಂದು ಮತ್ತು ಕೆಲಸಗಳನ್ನು ನಡೆಸಬೇಕಾದ ತಪಸೀಲುಗಳ ಅವಕಾಶ ಅವರಿಗೆ ತಿಳಿದಿದೆಯೆಂದು ಅರ್ಥವಾಗುತ್ತದೆ

ಷೀ ನಂ 1 ಕೆಲಸಕ್ಕೆ ರೂ. 2,835 ವಕ್ಕು ಷೀ ನಂ 2 ಕೆಲಸಕ್ಕೆ ರೂ 1195 ರಂತೆ ಅಗತ್ಯವಾದ ಇ ಎಂ ಡಿ ಶೇಕಡಾ 2½ ಯಷ್ಟನ್ನು ಟೆಂಡರ್‌ಗಳ ಜೊತೆ ಕೊಡಬೇಕು

ಸಿವಿಲ್ / ಎಲೆಕ್ಟ್ರಿಕಲ್ / ಮೆಕಾನಿಕಲ್ ವಿಷಯದಲ್ಲಿ ರಾಜ್ಯದೊಳಗೆ ಮಾನ್ಯತೆ ಪಡೆದಿರುವ ಸಂಸ್ಥೆಯಿಂದ ಡಿಗ್ರಿ / ಡಿಪ್ಲೊಮಾಗಳಲ್ಲಿ ಉತ್ತೀರ್ಣರಾಗಿರುವ ನಿರುದ್ಯೋಗಿ ಇಂಜಿನಿಯರುಗಳು ಟೆಂಡರ್‌ವನ್ನು ಸಲ್ಲಿಸುವಾಗ ಇ ಎಂ ಡಿ ವಿನಾಯಿತಿ ಪಡೆಯಲು ಜ. ಓ ನಲ್ಲಿ ಸೂಚಿಸಿರುವ ಪತ್ರಗಳನ್ನು ನಡೆಸಬೇಕು.

ಟೆಂಡರ್‌ಗಳನ್ನು ಆಹ್ವಾನಿಸಿರುವ ಹೇಳಲಾದ ಫಾರಂನಲ್ಲಿ ಸ್ಪಷ್ಟೀಕರಿಸಿರುವ ಪದಗಳಲ್ಲಿ ಅಥವಾ ಕೆಲಸ ಮಾಡಲು ಕಾಲಾವಕಾಶ ಕೊಟ್ಟಿರುವುದರಲ್ಲಿ ಯಾವುದೇ ಬದಲಾವಣೆಗಳನ್ನು ಸೂಚಿಸುವ ಅಥವ ಮತ್ತಾವುದಾದರು ಪತ್ರಗಳನ್ನು ಪಡೆದಿರುವ (ಕಾಂಟ್ರಾಕ್ಟ್ ಫಾರಂ ನಂ ಪಿಡಬ್ಲ್ಯೂಸಿ 65 (ಎ) ಷೆಡ್ಯೂಲ್‌ನ ಕ್ಲಾಸ್ 6 ನೋಡಿ) ಟೆಂಡರ್‌ಗಳು ತಿರಸ್ಕರಿಸಲ್ಪಡುವುವು

ಈ ಪ್ರಕಟಣೆ ಒಪ್ಪಂದದ ಒಂದು ಭಾಗವಾಗಿದೆ. ಹೆಚ್ಚು ವಿವರಗಳು ಯಾವುದೇ ಬೇಕಾಗಿದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಚೇರಿಯಿಂದ ಪಡೆಯಬಹುದು

ಕಬಿನಿ ನಿರ್ಮಾಣ ವಿಭಾಗದ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರ ಕಛೇರಿಯಲ್ಲಿ ಇ ಎಂ ಡಿ ಪಾವತಿ ಮಾಡಬೇಕು. ಹಾಗೆ ಮಾಡದೆ ಇದ್ದರೆ ಈ ಕೆಳಗೆ ಸಹಿ ಮಾಡಿರುವವರ ವಿವೇಚನೆಯಂತೆ ಟೆಂಡರ್‌ಗಳು ತಿರಸ್ಕರಿಸಲ್ಪಡಲು ಅರ್ಹವಾಗುವುವು.

ಷೀ ನಂ. 1 ಕೆಲಸಕ್ಕೆ ಕೆಲಸ ಮುಗಿಸಲು ಕಾಲಾವಧಿ 12 ತಿಂಗಳು ಮತ್ತು ಷೀ ನಂ 2 ನೇ ಕೆಲಸಕ್ಕೆ ಕೆಲಸ ಮುಗಿಸಲು ಕಾಲಾವಧಿ 8 ತಿಂಗಳು.

ಸೂಚನೆ — 1 ಫಾರಂಗಳನ್ನು ಕೊಡುವುದಕ್ಕಾಗಿ ಗೆಜಟೆಡ್ ಆಫೀಸರ್‌ರವರಿಂದ ಸಾಕ್ಷಿ ಹಾಕಿದ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಪ್ರತಿಯೊಡನೆ ಫಾರಂ ಸರಬರಾಜು ಮಾಡಲು ಕಂಟ್ರಾಕ್ಟರುಗಳು ಅರ್ಜಿ ಕೊಡಬೇಕು ಇಲ್ಲವಾದರೆ ಫಾರಂಗಳನ್ನು ಕೊಡಲಾಗುವುದಿಲ್ಲ

2 ಖಾಲಿ ಟೆಂಡರ್ ಫಾರಂಗಳನ್ನು ಸರಬರಾಜು ಮಾಡಲು, ಇ ಎಂ ಡಿ ಪಾವತಿ ಮಾಡಿರುವ ಬಗ್ಗೆ ಅಪೇಕ್ಷಿಸುವ ಟೆಂಡರ್‌ದಾರರು ಸಾಕ್ಷ್ಯವನ್ನು ಕೊಡಬೇಕು

ಷೀ ನಂ 1

ಕೆಲಸದ ಹೆಸರು – ಹೆಗ್ಗನೂರು ಕಾಲನಿಯಲ್ಲಿ ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ಕ್ವಾರ್ಟರ್ಸ್‌ಗಳನ್ನು ನಿರ್ಮಾಣ ಮಾಡುವುದು (ಎರಡು ಬ್ಲಾಕ್‌ಗಳು) (ಪಗರೆ–ದೊಡ್ಡಕೆರೆ ಪ್ಯಾಕೇಜ್)

ಟೆಂಡರ್‌ಗೆ ಇಡಲಾಗಿರುವ ಕೆಲಸದ ಅಂದಾಜು ದರ – ರೂ. 1,13,328

ಷೀ ನಂ 2

ಕೆಲಸದ ಹೆಸರು – ಹೆಗ್ಗನೂರು ಕಾಲನಿಯಲ್ಲಿ ಜೂನಿಯರ್ ಇಂಜಿನಿಯರ್‌ಗಳ ಕ್ವಾರ್ಟರ್ಸ್ ನಿರ್ಮಾಣ ಮಾಡುವುದು. (ಪಗರೆ–ದೊಡ್ಡಕೆರೆ ಪ್ಯಾಕೇಜ್)

ಟೆಂಡರ್‌ಗೆ ಇಡಲಾಗಿರುವ ಕೆಲಸದ ಅಂದಾಜು ದರ – ರೂ. 79,714

ಸಹಿ/– ಎಕ್ಸಿಕ್ಯೂಟೀವ್ ಇಂಜಿನಿಯರ್,
ಕಬಿನಿ ನಿರ್ಮಾಣ ವಿಭಾಗ,
ಕಬಿನಿ ಕಾಲನಿ.

ಬಾಂಗ್ಲಾದೇಶಕ್ಕೆ ಕರೆ

ಯಾವ ಮುನ್ನೆಚ್ಚರಿಕೆಯನ್ನು ತಪ್ಪದೆ ನೀವು ಗಾಯ ನೀರು ಹಂಚಿಕೊಳ್ಳುವ ಕಾರಣ ಭಾರತ ಮಾತೃಕತೆಗೆ ಸಿದ್ಧರಿರುವದಾಗಿ ಬಾಂಗ್ಲಾ ದೇಶಕ್ಕೆ ಮುಕ್ತ ತಿಳಿಸಲಾಗಿದೆ.

ತೊಂಬತ್ತನಾಲ್ಕು ಮಂದಿಯು ಅಯ್ಕೆ

ನವ ದೆಹಲಿ — ರಾಷ್ಟ್ರೀಯ ಪಾಠಿತೋಪಕರಕ್ಕೆ (ಒಂದು ಸರ್ಟಿಫಿಕೇಟ್, ಲೋಹದ ಬ್ಯಾಡ್ಜ್ ಮತ್ತು ರೂ. 1000) 94 ಉಪಾಧ್ಯಾಯರು ಆರಿಸಲ್ಪಟ್ಟಿದ್ದಾರೆ ಇವರ ಪೈಕಿ 5 ಮಂದಿ ಸಂಸ್ಕೃತ ಪಾಠಶಾಲೆಯವರು. ಮತ್ತಿಬ್ಬರು ಅರಬ್ಬಿ ಅಥವಾ ಪರ್ಷಿಯಾ ಭಾಷೆಯವರು.

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಷ್ಟ್ರದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

SHAKTI SUDHA

A Superb Tonic

Protect the Cow

Contribute Liberally to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajpet Mysore 4